ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1235
2 ಸದಸ್ಯರ ಹೆಸರು : ಶ್ರೀ ಎಂ. ಸಿ. ವೇಣುಗೋಪಾಲ್
3 ಉತ್ತರಿಸುವ ದಿನಾಂಕ : 21-12-2018
4 ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಸದರಿ ಶಾಲೆಗಳ ಮೂಲ ಉದ್ದೇಶವೇನು; ಹಾಗೂ ಪ್ರವೇಶಾತಿ ವಿಧಾನ ಯಾವುದು;</td><td>ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿರುವ ಶಾಲೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.
<table>
<tr><th></th><th>ವಿವರಗಳು</th><th>ಶಾಲೆಗಳ ಸಂಖ್ಯೆ</th></tr>
<tr><td>1.</td><td>ಶಿಶುವಿಹಾರಗಳು</td><td>92</td></tr>
<tr><td>2.</td><td>ಪ್ರಾಥಮಿಕ ಶಾಲೆ</td><td>15</td></tr>
<tr><td>3.</td><td>ಪ್ರೌಢಶಾಲೆ</td><td>32</td></tr>
<tr><td colspan="2">ಒಟ್ಟು</td><td>139</td></tr>
<tr><td>4.</td><td>ಬಿ.ಬಿ.ಎಂ.ಪಿ. ಭಾರತೀಯ ವಿದ್ಯಾಭವನ</td><td>1</td></tr>
</table>
ಮೇಲ್ಕಂಡ ಶಾಲೆಗಳಲ್ಲಿ ಯಾವುದೂ ವಸತಿ ಶಾಲೆಗಳು ಇರುವುದಿಲ್ಲ. ಸದರಿ ಶಾಲೆಗಳ ಮೂಲ ಉದ್ದೇಶ ಬೋಧನ ಹಾಗೂ ಮಕ್ಕಳ ಸರ್ವಾಂಗೀಣ ಬೆಳವಣಿಗೆ ಸರ್ಕಾರದ ಶಾಲೆಗಳಂತೆ ಪ್ರವೇಶಾತಿ ವಿಧಾನವನ್ನು ಅನುಸರಿಸಲಾಗುತ್ತಿದೆ.</td></tr>
<tr><td>ಆ)</td><td>ಸದರಿ ಶಾಲೆಗಳಲ್ಲಿ ಮಕ್ಕಳಿಗೆ ವಿಧಿಸುತ್ತಿರುವ ಶುಲ್ಕವೆಷ್ಟು; (ತರಗತಿವಾರು ವಿವರ ನೀಡುವುದು)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲೆಗಳಲ್ಲಿ ಮಕ್ಕಳಿಗೆ ವಿಧಿಸುತ್ತಿರುವ ಶುಲ್ಕದ ವಿವರಗಳು ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ.ಸಂ.</th><th>ವಿವರಗಳು</th><th>ಶುಲ್ಕದ ವಿವರಗಳು (ರೂ.ಗಳಲ್ಲಿ)</th></tr>
<tr><td>1.</td><td>1 ರಿಂದ 5ನೇ ತರಗತಿವರೆಗೆ</td><td>ಉಚಿತ ಪ್ರವೇಶ</td></tr>
<tr><td>2.</td><td>6 ಮತ್ತು 7ನೇ ತರಗತಿಯವರೆಗೆ</td><td>5 (ಎಸ್.ಎಸ್.ಎಫ್)</td></tr>
<tr><td>3.</td><td>8ನೇ ತರಗತಿ</td><td>198 ರೂ.ಗಳು (ಪ್ರವೇಶಾತಿ ಶುಲ್ಕ ಒಳಗೊಂಡಂತೆ)</td></tr>
<tr><td>4.</td><td>9 ಮತ್ತು 10ನೇ ತರಗತಿ</td><td>188 ರೂ.ಗಳು</td></tr>
<tr><td>5.</td><td>ಬಿ.ಬಿ.ಎಂ.ಪಿ. ಭಾರತೀಯ ವಿದ್ಯಾಭವನ</td><td>ರೂ.7000.00 ಗಳು (ಸದರಿ ಶುಲ್ಕವನ್ನು ಪಾಲಿಕೆಯೇ ಭರಿಸುತ್ತದೆ)</td></tr>
</table></td></tr>
</table>

<table>
<tr><td>ಇ)</td><td>ಪ್ರಸಕ್ತ ಸಾಲಿನಲ್ಲಿ ಸದರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ತರಗತಿವಾರು ವಿವರ ನೀಡುವುದು)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸಕ್ತ ಸಾಲಿನಲ್ಲಿ ಓದುತ್ತಿರುವ ಮಕ್ಕಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ.ಸಂ.</th><th>ವಿವರಗಳು</th><th>ವಿದ್ಯಾರ್ಥಿ/ ವಿದ್ಯಾರ್ಥಿನಿಯರುಗಳ ಸಂಖ್ಯೆ</th></tr>
<tr><td>1.</td><td>ಶಿಶುವಿಹಾರಗಳು</td><td>4350</td></tr>
<tr><td>2.</td><td>ಪ್ರಾಥಮಿಕ ಶಾಲೆ</td><td>1830</td></tr>
<tr><td>3.</td><td>ಪ್ರೌಢಶಾಲೆ</td><td>5140</td></tr>
<tr><td>4.</td><td>ಬಿ.ಬಿ.ಎಂ.ಪಿ. ಭಾರತೀಯ ವಿದ್ಯಾಭವನ</td><td>743</td></tr>
</table></td></tr>
<tr><td>ಈ)</td><td>ಸದರಿ ಶಾಲೆಗಳಲ್ಲಿ ಅನುಸರಿಸುತ್ತಿರುವ ಬೋಧನ ಪಠ್ಯ ಕ್ರಮ ಯಾವುದು? (ವಿವರವಾದ ಮಾಹಿತಿ ಒದಗಿಸುವುದು)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಾಲೆಗಳಲ್ಲಿ, ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ನಿಗಧಿಪಡಿಸಿರುವ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿದೆ.

ಪ್ರಥಮ ಭಾಷೆಗಳು:- ಕನ್ನಡ, ಸಂಸ್ಕೃತ, ಹಿಂದಿ, ಉರ್ದು, ತೆಲುಗು ಮತ್ತು ತಮಿಳು

ದ್ವಿತೀಯಭಾಷೆ:-ಇಂಗ್ಲೀಷ್

ತೃತೀಯ ಭಾಷೆ:-ಕನ್ನಡ, ಹಿಂದಿ

ಐಚ್ಚಿಕ ವಿಷಯಗಳು :- ಗಣಿತ, ವಿಜ್ಞಾನ, ಸಾಮಾನ್ಯ ವಿಜ್ಞಾನ

ಬಿ.ಬಿ.ಎಂ.ಪಿ. ಭಾರತೀಯ ವಿದ್ಯಾಭವನ- ಸಿ.ಬಿ.ಎಸ್.ಸಿ.ಪಠ್ಯಕ್ರಮ</td></tr>
</table>

ಸಂಖ್ಯೆ: ನಅಇ 611 ಎಂಎನ್‌ಜಿ 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು